# ✳ ವ್ಯಕ್ತಿ : ವಿವಿಧ ಸಿದ್ಧಾಂತಗಳ ಹಿನ್ನೆಲೆಯಲ್ಲಿ ✳

ಡಾ. ಪಾಂಡುರಂಗ ವಿಠಲ

ನಮ್ಮ ಮೂಲ ಸ್ವರೂಪವೇನು ಎಂಬ ಪ್ರಶ್ನೆ ಅನೇಕ ಚಿಂತಕರನ್ನು ಕಾಡಿದೆ. ಅನೇಕ ಸಿದ್ಧಾಂತಗಳು ಇಂತಹ ಚಿಂತನೆಯ ಫಲವಾಗಿ ಪ್ರಸಿದ್ಧವಾಗಿವೆ. ಅವುಗಳನ್ನು ಸಂಗ್ರಹಿಸಿ ಪರಿಚಯ ಮಾಡಿರುವ ಲೇಖಕರು ಮೈಸೂರಿನ ಸದ್ವಿದ್ಯಾ ಪಾಠಶಾಲೆಯಲ್ಲಿ ಉಪನ್ಯಾಸಕರಾಗಿದ್ದಾರೆ.

ಇದ್ದಕ್ಕಿದ್ದಂತೆ ಒಂದು ದಿನ ನಿಮ್ಮ ಮನೆಯಲ್ಲಿ ಏಕಾಂಗಿಯಾಗಿ ಉಳಿಯುತ್ತೀರಿ ಎಂದುಕೊಳ್ಳೋಣ. ಆಗ ಗಡಿಯಾರ ನಿಂತುಹೋದಂತೆ ಅನ್ನಿಸಿ ಸ್ವಲ್ಪ ಹೊತ್ತಿನಲ್ಲೆ ಚಡಪಡಿಸುತ್ತೀರಿ. ಬೇಸರ ಎಂದು ಬೇರೆಯವರ ಸಂಗಕ್ಕಾಗಿ ಹುಡುಕಿ ತಿರುಗುತ್ತೀರಿ. ಅದೂ ಆಗದಿದ್ದರೆ, ಕಾದಂಬರಿ ಹುಡುಕಿ, ರೇಡಿಯೋ ಹಚ್ಚುತ್ತೀರಿ. ಚೇತನಾತ್ಮಕವಾಗಿ ಹೊರಪ್ರಪಂಚದ ಜತೆ ಸೇರಲು ತಹತಹಿಸುತ್ತೀರಿ. ಇದಕ್ಕೆ ಕಾರಣವೇನು? ಸುಲಭವಾಗಿ "ಮನುಷ್ಯ ಸಾಮಾಜಿಕ ಜೀವಿ" ಎಂಬ ಉತ್ತರ ನಿಮ್ಮಿಂದ ಬಂದೀತು.

## ಸ್ವಂತಿಕೆಯುಳ್ಳ ವ್ಯಕ್ತಿ

ಮೇಲಿನ ಉತ್ತರ ಪೂರ್ಣ ಸತ್ಯವಲ್ಲ. ಹಾಗೆಯೆ, "ನಿಮ್ಮನ್ನು ನೀವು ಸಹಿಸಿಕೊಳ್ಳಲು ಅಸಾಧ್ಯ" ಎಂದೂ ಅರ್ಥವಲ್ಲ. ಒಂದು ಬಗೆಯ 'ಶೂನ್ಯತೆ' ನಿಮ್ಮನ್ನು ಕವಿಯುತ್ತದೆ ಅಥವಾ ಹೊರ ಜಗತ್ತಿನ ಬಗೆಗಿನ ಸ್ಪಂದನಗಳೆಲ್ಲ ನಿಂತಾಗ ನಿಮ್ಮ ವ್ಯಕ್ತಿತ್ವದ ಮೂಲ ರೂಪ, ಏಕತಾನತೆ ನಿಮ್ಮ ಕಣ್ಣಿಗೆ ಬೀಳುತ್ತದೆ ಎಂದು ಹೇಳಬಹುದು. ಮನುಷ್ಯನ ವೈಶಿಷ್ಟ್ಯ ಎಂದರೆ, ಅರಿವು. ಪ್ರಪಂಚವು ಅರಿವಿಗೆ ತೋರಿಬರುವಂಥ ವಿಷಯ. ಹಾಗೆಯೇ, ಅರಿವಿಗೇ 'ಅರಿವಿನ' ಪ್ರಜ್ಞೆ ಇರುವುದರಿಂದ ಇದು ಆಂತರಿಕವಾದದ್ದು ಕೂಡ. ಈ ಸ್ವಯಂಪ್ರಜ್ಞೆಯ ಅರಿವಿನ ಮೇಲೆ ಬುದ್ಧಿಯ ಪ್ರಭಾವ ಬಿದ್ದಾಗ ತಾನು ಬೇರೆ, ಪ್ರಪಂಚ ಬೇರೆ ಎನ್ನಿಸುತ್ತದೆ. ಈ ಪ್ರತ್ಯೇಕತೆಯ ಭಾವನೆಯನ್ನೇ ಅಹಂಕಾರ ಎನ್ನಬಹುದು. ಮನುಷ್ಯನ 'ಅಸ್ತಿತ್ವ'ಕ್ಕೆ ಆಧಾರವಾದ ಈ ಅರಿವು ಯಾವ ಸತ್ವವನ್ನೂ ಹೊಂದಿರದೆ ಇರುವುದರಿಂದ ಅದರ ಮೂಲ ಸ್ವರೂಪ 'ಶೂನ್ಯತೆ'. ಇದು ಶೂನ್ಯತೆಯಾಗಿಯೇ ಇರಲು ಅಸಾಧ್ಯ—ಯಾವುದಾದರೊಂದು ವಸ್ತು-ವಿಷಯವನ್ನು ಅರಿಯುವ ಬಯಕೆ ಇರಬೇಕು ಎನ್ನುತ್ತಾರೆ ಪ್ರಸಿದ್ಧ ತತ್ವಶಾಸ್ತ್ರಜ್ಞರಾದ ಸಾರ್ತ್ರ್. ತಾನು ಶೂನ್ಯ ಎಂದು, ಅದರಿಂದಾಗಿ ಹೀಗಾಗಬೇಕು, ಹಾಗಾಗಬೇಕೆಂಬ ಆಕಾಂಕ್ಷೆ, ಆಕಾಂಕ್ಷೆಯಿಂದ ಕ್ರಿಯೆ — ಈ ಸರಪಳಿಯು ವ್ಯಕ್ತಿಯ ಬಾಳಿಗೆ ಚಾಲನೆಯನ್ನೊದಗಿಸುತ್ತದೆ. ಈ ಅರಿವಿನ ಮೂಲ ಸ್ವರೂಪ ಅಥವಾ ಶೂನ್ಯತೆಯು ಕ್ರಿಯೆಯಲ್ಲಿ ತೊಡಗದೆ ಇರುವಾಗ ಮಾತ್ರ ನಮ್ಮ ಅನುಭವಕ್ಕೆ ಬರುತ್ತದೆ. 'ನಾನು' ಯಾರು? ನನ್ನ ಗೊತ್ತು ಗುರಿಗಳೇನು? ಕ್ರಿಯೆ ಏಕೆ? ಮೌಲ್ಯಗಳಿಂದ ಪ್ರಯೋಜನ ಏನು? ಎಂಬ ಪ್ರಶ್ನೆಗಳು ತಲೆ ತಿನ್ನತೊಡಗುತ್ತವೆ. ಸನ್ನಿವೇಶದಿಂದ ಸನ್ನಿವೇಶಕ್ಕೆ ಸಾಗುವಾಗ ಆದ ಅನುಭವವು ಗತಕಾಲವಾಗಿ, ನಶ್ವರತೆ ಹಾಗೂ ಅತೃಪ್ತಿಯು ಶೂನ್ಯತೆಯ ಮೊದಲಿನ ಸ್ಥಿತಿಗೆ ಬರುವಂತೆ ಮಾಡುತ್ತದೆ. ಪುನಃ ಅದರಿಂದ ಆಕಾಂಕ್ಷೆ, ಭವಿಷ್ಯದ ಆಸೆಯಿಂದ ಕ್ರಿಯೆ, ಹೀಗೆ ಅಡಿಪಾಯದಂತೆ ಶೂನ್ಯತೆ ಮತ್ತು ಅರಿವು ಮನುಷ್ಯನನ್ನು ಕ್ರಿಯಾಶೀಲನನ್ನಾಗಿ ಮಾಡುತ್ತವೆ, ಜೀವನಕ್ಕೆ ಉದ್ದೇಶ ಮತ್ತು ಅರ್ಥವನ್ನು ನೀಡುತ್ತವೆ. ತನ್ನನ್ನು ತಾನು ರೂಪಿಸಿಕೊಳ್ಳುವಿಕೆಯು ಅವನ 'ಜನ್ಮಸಿದ್ಧ ಸ್ವಾತಂತ್ರ್ಯ' (ಪೂರ್ವನಿಶ್ಚಿತವಾದವು ಹುಸಿ). ಸ್ವಾತಂತ್ರ್ಯ ಮತ್ತು ಹೊಣೆಗಾರಿಕೆಯನ್ನು ಸ್ವೀಕರಿಸುವವನು ಸ್ವಂತಿಕೆಯುಳ್ಳ ವ್ಯಕ್ತಿ.



ತತ್ವಶಾಸ್ತ್ರಜ್ಞ ಸಾರ್ತ್ರ್

ನೆನಪು-ಆಸೆಗಳ ಪ್ರಚೋದನೆಯಿಂದ ವ್ಯಕ್ತಿಯು ವರ್ತಮಾನದ ಕ್ರಿಯೆಯಲ್ಲಿ ತೊಡಗುತ್ತಾನೆ. ಕಾಲ,ಸ್ಥಳಗಳು ವ್ಯಕ್ತಿಗತವಾದ ಮಾನಗಳು. ಜೀವಿಸುವುದೆಂದರೆ ಕಾಲವನ್ನು ಕ್ರಿಯೆಯಲ್ಲಿ ತೊಡಗಿಸುವುದೇ. ಇದು ಕಾಲವನ್ನು ಅರಿವಿನಲ್ಲಿ ಒಳಗೊಳಿಸುವುದು. ದೂರ ಅಥವಾ ಸಮೀಪ ಎನ್ನುವುದೂ ಹೀಗೆಯೇ, ಅದೊಂದು ವ್ಯಕ್ತಿಗತವಾದ ಪರಿಮಾಣ. ಆದರೆ ವ್ಯಕ್ತಿಯು ಪ್ರಾಣಿಗಳಿಗಿಂತ ಭಿನ್ನನಾಗಿ, ವಿಶಿಷ್ಟನಾಗುವುದು ತನ್ನ ಸ್ವಾತಂತ್ರ್ಯಪ್ರಜ್ಞೆಯಿಂದ. ತನ್ನನ್ನು ಬೇರೆಯವರ ಮಾದರಿಯಲ್ಲಿ ರೂಪಿಸಿಕೊಳ್ಳುವ, ಹೊಣೆಗಾರಿಕೆಯನ್ನೆ ತಿರಸ್ಕರಿಸುವ, ಪ್ರಭಾವಕ್ಕೆ ಒಳಪಟ್ಟು ಸ್ವಾತಂತ್ರ್ಯವನ್ನು ಉಪಯೋಗಿಸುವ ಯೋಚನೆಯನ್ನೆ ಮಾಡದ ಸಾಧಾರಣ ಮಾನವನು 'ಸ್ವಂತಿಕೆ'ಯುಳ್ಳ ಸಂಪೂರ್ಣ ವ್ಯಕ್ತಿಯಲ್ಲ. ಸ್ವಾತಂತ್ರ್ಯವನ್ನು ಉಪಯೋಗಿಸಿದಾಗ ಮಾತ್ರ ತನ್ನ ಅಸ್ತಿತ್ವದ ಅರಿವಿನಿಂದ ಸುತ್ತಲಿನ ವಸ್ತು-ವ್ಯಕ್ತಿಗಳನ್ನು ತನ್ನ ಆಕಾಂಕ್ಷೆಯನ್ನು ಪೂರ್ಣಗೊಳಿಸುವಲ್ಲಿ

ಉಪಕರಣವಾಗಿ ಬಳಸಬಹುದೆಂಬ ಜ್ಞಾನ ಬರುತ್ತದೆ. ಸುತ್ತಲಿನ ವ್ಯಕ್ತಿಗಳ ಸ್ವಾತಂತ್ರ್ಯ ಇದಕ್ಕೆ ಅಡ್ಡಬಂದಲ್ಲಿ ಘರ್ಷಣೆ ಉಂಟಾಗುತ್ತದೆ; ಈ ಘರ್ಷಣೆಯನ್ನು ನಿವಾರಿಸುವ ಸಹಕಾರ ಹಾಗೂ ಸಂಘಜೀವನವು ಬಳಕೆಯಾಗಿ, ಸಮಾಜದ ಕಲ್ಪನೆ ಮೂಡುತ್ತದೆ. ಹೀಗೆ ವ್ಯಕ್ತಿಯು ತನ್ನ ಪರಿಮಿತಿಗಳನ್ನು ಸಾಮಾಜಿಕ ಮೌಲ್ಯಗಳನ್ನಾಗಿ, ನೈತಿಕ ನಿಯಮಗಳ ಚೌಕಟ್ಟನ್ನಾಗಿ ತಿಳಿಯುತ್ತಾನೆ. ಇವುಗಳ ನಡುವಿನ ಜೀವನಕ್ಕೆ ಭಾವನೆಗಳ ಮೂಲಕವಾಗಿ ಪ್ರತಿಕ್ರಿಯೆ ತೋರುತ್ತ ಒಂದು ಬಗೆಯ ಗಂಭೀರತೆಯನ್ನು ಅನುಭವಿಸುತ್ತಾನೆ. ಅವನ ಮನಸ್ಸಿನಲ್ಲಿ ಇತರ ವ್ಯಕ್ತಿಗಳು ತಮ್ಮ ವರ್ತನೆಯಿಂದ ಚಿತ್ರಗಳಂತೆ ಸುಳಿದಾಡುತ್ತಾರೆ. ಅವರ ನಡುವೆ ಸಂವೇದನಾಪೂರ್ವಕ ಸಂಪರ್ಕ ಸಾಧ್ಯವಾದಾಗ, ತನ್ನ ಕ್ರಿಯೆಗಳಿಗೆ ಪ್ರತಿಕ್ರಿಯೆಯನ್ನು—ಪರಸ್ಪರ ಸ್ವಾತಂತ್ರ್ಯದ ಗುರುತಾಗಿ—ಸ್ವೀಕರಿಸಿದಾಗ ಆಂತರಿಕ ಸಂಬಂಧ ಏರ್ಪಟ್ಟು ಚಿತ್ರವು 'ವ್ಯಕ್ತಿ'ಯಾಗಿ ಮಾರ್ಪಡುತ್ತದೆ. ಭಾವನೆಗಳ ಸಂವೇದನೆ ಅಥವಾ ಸಹಾನುಭೂತಿಯು ಅಂಥ ಸಂಬಂಧಗಳಿಗೆ ಹೆಚ್ಚಿನ ಅರ್ಥವನ್ನು ನೀಡುತ್ತದೆ. ಈ ಸಂಬಂಧಗಳು ಪರಿವರ್ತನಶೀಲವಾದವು ಎಂಬ ಅರಿವು ವ್ಯಕ್ತಿಯು ಕಾಲವನ್ನು ಜೀವಿಸುವಂತೆ ಮಾಡುತ್ತವೆ. ಆದರೆ ಬರೀ ಹಿಂದಿನ ಅನುಭವಗಳನ್ನೆ ಮೆಲುಕು ಹಾಕುತ್ತ ಕುಳಿತರೆ ವ್ಯಕ್ತಿಯ ಭವಿಷ್ಯ ಮೊಟಕಾಗುತ್ತದೆ, ಸಂಬಂಧಗಳಲ್ಲಿ ಘರ್ಷಣೆ ಹೆಚ್ಚಾಗಿ, ಆತನು ತನ್ನಲ್ಲೆ ಕಮರಿಹೋಗುತ್ತಾನೆ. ವ್ಯಾವಹಾರಿಕವೂ, ಬೌದ್ಧಿಕವೂ ಆದ ಕ್ರಿಯೆ ಮಾತ್ರ ಇಂಥ ಅಪಾಯದಿಂದ ವ್ಯಕ್ತಿಯನ್ನು ಪಾರು ಮಾಡಲು ಸಹಕಾರಿಯಾಗುತ್ತದೆ. ಸಮಾಜದ ಇತರ ವ್ಯಕ್ತಿಗಳೊಡನೆ ಏರ್ಪಡುವ ಸಂಬಂಧವು ದೃಶ್ಯ-ಭಾಷೆಗಳಲ್ಲಿ ಅಭಿವ್ಯಕ್ತಗೊಳ್ಳುವುದಾದರೂ, ಭಾವಾನುರೂಪ ಮತ್ತು ಇಂದ್ರಿಯಾತೀತ ಸಂಪರ್ಕಗಳಲ್ಲೂ ಇದು ಸಾಧ್ಯವಾಗುತ್ತದೆ.

### ನೈತಿಕತೆ

ವ್ಯಕ್ತಿಯ ಮೂಲರೂಪವಾದ ಆಂತರಿಕತೆ ಮುಖ್ಯವೋ ಅಥವಾ ಪ್ರತ್ಯೇಕರೂಪದಿಂದ, ಇತರರೊಂದಿಗಿನ ಪ್ರತಿಕ್ರಿಯೆಗಳಲ್ಲಿ ಕಾಣಿಸಿಕೊಳ್ಳುವ 'ಹೊರ ವ್ಯಕ್ತಿತ್ವ' ಅಥವಾ ವ್ಯಾವಹಾರಿಕ ಬಾಳುವೆ ಮುಖ್ಯವೋ ಎಂಬುದು ಜಿಜ್ಞಾಸೆಯ ವಿಷಯ. ನೈತಿಕ ಜೀವನವು ಇತರರ ಜತೆಗಿನ ಸಂಬಂಧವನ್ನು, ಅದೆಂದರೆ ಸಮಷ್ಟಿಯನ್ನು ಆಧರಿಸಿರುವುದರಿಂದ, ಬಹಿರಂಗವು ಎಷ್ಟೇ ಮುಖ್ಯವಾದರೂ, ಆಂತರಿಕವಾಗಿ ತನ್ನ—ಪ್ರಪಂಚದೊಡಗಿನ 'ಐಕ್ಯತೆ'ಯನ್ನು ವ್ಯಕ್ತಿ ಗುರುತಿಸಿಕೊಳ್ಳಬೇಕಾಗುತ್ತದೆ. ಈ ಅಂತಃಪ್ರಜ್ಞೆಯನ್ನು 'ಆತ್ಮ'ವೆಂದೂ, ಅಹಂಕಾರದಿಂದ ಇದು ಬೇರೆಯಾದುದೆಂದೂ ಹಲವರು ಹೇಳುತ್ತಾರೆ.

ನೈತಿಕತೆಗೆ ಅರ್ಥವನ್ನು ಒದಗಿಸುವ ವ್ಯಕ್ತಿಯ 'ಸ್ವಾತಂತ್ರ್ಯ' ನಿಜವಾದುದೆ ಎಂಬುದೂ ವಾದಗ್ರಸ್ತ. ಕಾಲ-ದೇಶ, ಪರಿಸರದ ಸ್ಥಿತಿ, ಮಾನವಸಹಜ ಪ್ರಕೃತಿ ಮತ್ತು ವ್ಯಕ್ತಿಗತವಾದ ಮಿತಿಗಳಿದ್ದರೂ ಮಾನವನಿಗೆ ಸ್ವಾತಂತ್ರ್ಯವು ಇಲ್ಲ ಎನ್ನುವುದು ಅಸಾಧ್ಯ. ಅಂಥ ಸ್ವಾತಂತ್ರ್ಯ ಬೆಲೆಯುಳ್ಳದ್ದು ಕೂಡ—ಇಲ್ಲವಾದಲ್ಲಿ ನೈತಿಕತೆಗೆ ಅರ್ಥವಿಲ್ಲ. ಈ ಹೊಣೆಗಾರಿಕೆಯುಳ್ಳ ಸ್ವಾತಂತ್ರ್ಯವು ಕೊಡುವ ಹಿಂಸೆಯನ್ನು ಪ್ರಸ್ತಾಪಿಸುತ್ತಾನೆ ಸಾರ್ತ್ರ್. ಆತ ಜೀವನಕ್ಕೆ ಅರ್ಥ, ಉದ್ದೇಶಗಳನ್ನು ತಂದುಕೊಡುವ ದೇವರನ್ನು ಒಪ್ಪದಿರುವುದೇ ಈ ಹಿಂಸೆ ಎಂಬ ದೃಷ್ಟಿಗೆ ಕಾರಣವಿದ್ದೀತು. ತನ್ನ ಮತ್ತು ಇತರರ ಭವಿಷ್ಯವನ್ನು ನಿರ್ಣಯಿಸುವ ಕಾರ್ಯಗಳನ್ನು ಅನಿವಾರ್ಯವಾಗಿ ತಾನೇ ಮಾಡಬೇಕಾದ ಒಂಟಿತನ, ಇರುವ ಕೆಲವೇ ಮಾರ್ಗಗಳಲ್ಲಿ ಒಂದನ್ನು ಆರಿಸಲೇಬೇಕಾದ ಒತ್ತಡ ಮತ್ತು ಮುಂದೇನಾಗುವುದೋ ಎಂಬ ಉದ್ವೇಗಯುಕ್ತ ಕಾಳಜಿ—ಇವು ಈ ಹಿಂಸೆಯ ರೂಪಗಳು. ಆದರೆ ಇದು ಅನುಭವಿಸಬೇಕಾದದ್ದೇ. ಇತರರಿಗೆ ತಾನು ಹೊಣೆಯಲ್ಲ ಎನ್ನುವ ಸ್ವಾರ್ಥಿಯು ಹೀನತೆಯ ಭಾವದಿಂದಾಗಿ ಅಶಾಂತಿಗೆ ಗುರಿಯಾಗುತ್ತಾನೆ. ತನ್ನ ಒಳಗಿನ ಶೂನ್ಯತೆಯನ್ನು ತುಂಬಿಕೊಳ್ಳಲು ಮನುಷ್ಯನು ಸೃಷ್ಟಿಸಿಕೊಂಡ ಮೌಲ್ಯಗಳಲ್ಲಿ ನೈತಿಕತೆಯು ಶ್ರೇಷ್ಠವಾದುದೆನ್ನುತ್ತಾನೆ ಸಾರ್ತ್ರ್. ಜನತೆಯಲ್ಲಿನ ಅಸಮಾನತೆಗಳನ್ನು ಹುಟ್ಟಿಸಿ ಹರಡುವ ಮತೀಯ ನಂಬಿಕೆಗಳನ್ನು ಅಳಿಸಿಹಾಕಿದಾಗ ಅಸಮಾನತೆ, ದಾರಿದ್ರ್ಯದಿಂದ ಉಂಟಾಗುವ ಸ್ವಾರ್ಥ, ಕೆಟ್ಟತನಗಳು ಮಾಯವಾಗಿ, ಮನುಷ್ಯನ ಸ್ವಭಾವಸಹಜವಾದ ನೈತಿಕತೆಯು ಪ್ರಕಾಶಕ್ಕೆ ಬರುವುದು ಎಂದು ಮಾರ್ಕ್ಸ್ ಹೇಳುತ್ತಾನೆ.

ನಂಬಿಕೆ, ಶ್ರದ್ಧೆಗಳನ್ನೇ ಬಂಡವಾಳವಾಗಿ ಉಳ್ಳ ಮತಧರ್ಮಗಳ ಅಭಿಪ್ರಾಯವೇ ಬೇರೆ. ಜೀವನವು ಸಾವಿನಿಂದ ಆಚೆಗೂ ಮುಂದುವರಿಯುತ್ತದೆ. ಆಗ ಇಲ್ಲಿ ಮಾಡಿರುವ ಕರ್ಮಗಳಿಗೆ ಫಲ ಅನುಭವಿಸಬೇಕಾಗಿ ಬರುತ್ತದೆ. ಈ ದೃಷ್ಟಿಯು ಪ್ರಭಾವಶಾಲಿಯಾದುದಾದರೂ, ದೇವರು, ಧರ್ಮಗಳ ಮೇಲಿನ ನಂಬಿಕೆ ಮಸುಕಾದಾಗ ಇದಾವುದೂ ಪ್ರಯೋಜನಕ್ಕೆ ಬರುವುದಿಲ್ಲ.

ಶ್ರೀರಾಮಕೃಷ್ಣರ ಸಮನ್ವಯ ಮಾರ್ಗ—ಆಧ್ಯಾತ್ಮಿಕತೆ ಎಂಬುದು ಸಾವಿನ ಅನಂತರದ ಮೌಲ್ಯವಲ್ಲ, ದೈಹಿಕ ಸುಖ ಮಾತ್ರವೇ ಮುಖ್ಯ ಎಂದು ತಿಳಿಯುವ ಈ ಪ್ರಾಪಂಚಿಕ ಜೀವನದಲ್ಲಿಯೇ ಸಾಧಿಸಬಹುದಾದ ಮೌಲ್ಯ ಎನ್ನುವುದೇ ಬಹುಶಃ ನೈತಿಕತೆಯ ಪ್ರಯೋಜನದ ಬಗೆಗೆ ಸಮರ್ಪಕ ಉತ್ತರವಾಗಬಹುದು.

### ವ್ಯಕ್ತಿ ಮತ್ತು ಭೌತವಸ್ತು

ಭಾರತೀಯರಲ್ಲಿ ಮನಸ್ಸೆಂಬುದು ಜ್ಞಾನೇಂದ್ರಿಯ, ಆತ್ಮದಿಂದ ಭಿನ್ನವಾದದ್ದು. ಪಾಶ್ಚಾತ್ಯರಲ್ಲಿ ಮನಸ್ಸೆಂಬುದು ಆಧ್ಯಾತ್ಮಿಕ ಪರಿಕಲ್ಪನೆ. ಮನುಷ್ಯನ ವಿಶಿಷ್ಟ ಗುಣ ಅರಿವು ಅಥವಾ ಚೇತನ.*

ಮನುಷ್ಯನ ಇರುವಿಕೆ ಭೌತಿಕ ವಸ್ತುವಿಗಿಂತ ಭಿನ್ನವಾದದ್ದು. 'ಜೀವನ'ವು ಸ್ವಯಂಪ್ರಜ್ಞೆಯಿಂದ ಕೂಡಿದ್ದು, ಮಾರ್ಟಿನ್ ಹೈಡೆಗರ್‌ನ ಪ್ರಕಾರ ಪ್ರಪಂಚವೇ ಅರಿವಿನ ವಿಷಯ: ಎರಡೂ ಸಂಕೀರ್ಣ ಐಕ್ಯತೆಯಿಂದ ಕೂಡಿದೆ. ಅರಿವಿನ ಸ್ವರೂಪ ಆವರಿಸುವಿಕೆ—ಆವರಣದಲ್ಲಿ ಪ್ರಪಂಚವು ಪ್ರಕಟವಾಗುತ್ತವೆ. ಹಾಗೂ ಸ್ವತಃ ಅರಿವೂ ಪ್ರಕಾಶಿತವಾಗುತ್ತದೆ; ಇದೇ ಸ್ವಯಂ ಪ್ರಜ್ಞೆ. ಇದು ಅರಿವಿಗೆ ಆಂತರಿಕತೆಯನ್ನು ಒದಗಿಸಿ, 'ತನ್ನದು' ಎಂಬ ಭಾವನೆಯನ್ನು ಸಾಧ್ಯವಾಗಿಸುತ್ತವೆ. ಆದರೆ ಈ ಆಂತರಿಕತೆಯು ಪ್ರಪಂಚವನ್ನು ಒಳಗೊಂಡಿದ್ದು, ಬುದ್ಧಿಯು ಇದರ ಮೇಲೆ ಪ್ರಭಾವ ಬೀರಿದಾಗ ಪ್ರಪಂಚವು ಬೇರೆ ಎಂಬ ಭಿನ್ನತೆ ತಲೆದೋರುತ್ತದೆ. ಆದರೆ, ಅಡಿಪಾಯವಾಗಿ ಪ್ರಜ್ಞೆ ನಿಂತಿರುವುದರಿಂದ ಸಂಕೀರ್ಣ ಐಕ್ಯತೆಯು ಇದರಿಂದ ನಾಶವಾಗುವುದಿಲ್ಲ. ಪ್ರಪಂಚ ಎಂದರೆ ಎಲ್ಲವೂ ಎಂದಲ್ಲ. ಒಂದು ಅತಿ ಚಿಕ್ಕ ಭಾಗ ಅಥವಾ ಸನ್ನಿವೇಶ ಮಾತ್ರ ಒಬ್ಬ ವ್ಯಕ್ತಿಯ ಅರಿವಿನ ವಿಷಯವಾಗಿರುತ್ತದೆ. ಇದರಲ್ಲಿ ಭೌತ ವಸ್ತುಗಳೂ, ಇತರ ವ್ಯಕ್ತಿಗಳೂ ಇರುತ್ತಾರೆ. ವ್ಯಕ್ತಿಯ ಬಾಳೆಲ್ಲ ಸನ್ನಿವೇಶಗಳ ಸರಪಳಿ.

ವ್ಯಕ್ತಿಯ ಅರಿವಿನ ಮೂಲಸ್ವರೂಪವೇ ಶೂನ್ಯತೆಯಾದ್ದರಿಂದ ಅದು ಯಾವಾಗಲೂ ಅವನಲ್ಲಿ ಉಳಿಯುತ್ತದೆ. ಆದ್ದರಿಂದ ಯಾವ ವಸ್ತು ಅಥವಾ ಅನುಭವದಲ್ಲೂ ಅವನಿಗೆ ಶಾಶ್ವತ ತೃಪ್ತಿ ಸಿಕ್ಕದು. ಪ್ರತಿ ಅನುಭವವೂ ಅವನ ಅರಿವಿನಿಂದ ವಿಸರ್ಜಿಸಲ್ಪಟ್ಟು, ಗತಕಾಲವಾಗಿ ಪರಿಣಮಿಸುತ್ತದೆ. ಅಂತೆಯೇ ಅವನು ಹೊಸ ಅನುಭವ ಅಥವಾ ಮೌಲ್ಯದತ್ತ ಸಾಗುತ್ತಾನೆ. ಹೀಗೆ ಭೂತಭವಿಷ್ಯಗಳ ಮಧ್ಯೆ ವರ್ತಮಾನವು ಅತಿ ಕ್ಷಣಿಕವಾಗಿ ಪರಿಣಮಿಸುತ್ತದೆ. ಈ ರೀತಿ ಆಂತರಿಕ ಶೂನ್ಯತೆಯಿಂದ ಆಕಾಂಕ್ಷೆ, ಆಕಾಂಕ್ಷೆಯಿಂದ ಬರುವ ಪ್ರಾಪಂಚಿಕ ಅನುಭವಗಳು, ಆಂತರಿಕ ಶೂನ್ಯತೆಯಿಂದಲೇ ಉಂಟಾಗುವ ಅನುಭವಗಳ ನಶ್ವರತೆ ಹಾಗೂ ಅತೃಪ್ತಿ— ಇದು ಬಾಳಿನ ಆಂತರಿಕ ಚಿತ್ರ. ಹೀಗೆ ಅಭಾವ ಅಥವಾ ಅತೃಪ್ತಿಯಿಂದ ಮೊದಲಾದ ಬಾಳು ಅತೃಪ್ತಿಯಿಂದಲೇ ಮುಗಿಯುತ್ತದೆ. ಹೀಗಾಗಿ, ವ್ಯಕ್ತಿಯಲ್ಲಿನ ಆಕಾಂಕ್ಷೆ, ಕ್ರಿಯಾಶೀಲತೆಗಳೇ ಅವನ ಅರಿವಿನ ಮೂಲ ಸ್ವರೂಪ.

ಹೈಡೆಗರ್‌ನ ಪ್ರಕಾರ ಆಕಾಂಕ್ಷೆಯಿಂದ ಕ್ರಿಯೆಯಲ್ಲಿ ತಲ್ಲೀನನಾದಾಗ ವ್ಯಕ್ತಿಗೆ ತನ್ನ ಅಸ್ತಿತ್ವದ ತೀಕ್ಷ್ಣ ಅರಿವುಂಟಾಗುತ್ತದೆ. ಕ್ರಿಯಾಶೀಲತೆಯು ಅವನ ಬಾಳಿಗೆ ಅರ್ಥಪುಷ್ಟಿಯನ್ನು ನೀಡುತ್ತದೆ—ಸೋಮಾರಿ ಬದುಕು ಹೊರೆ. ಆದರೆ ವ್ಯಕ್ತಿಯು ತನ್ನ ಕರ್ತೃತ್ವಕ್ಕೆ ಪೋಷಕವಾಗಿ, ಅಧೀನವಾಗಿ, ಆಗಾಗ್ಗೆ ವೀಕ್ಷಕನಾಗಿ, ವಿಶ್ರಾಂತಿ ಪಡೆಯಬಹುದು. ವ್ಯಕ್ತಿಯ ಸ್ವರೂಪವೇ ಕ್ರಿಯಾಶೀಲತೆ; ಅಲ್ಲದಿದ್ದರೆ ಅದಕ್ಕೆ ಉದ್ದೇಶವಾಗಲೀ ಅರ್ಥವಾಗಲೀ ಇರುತ್ತಿರಲಿಲ್ಲ. ಸಾರ್ತ್ರ್‌ನ ಪ್ರಕಾರ ವ್ಯಕ್ತಿಯು ಮುಖ್ಯವಾಗಿ ಕರ್ತೃ ಮತ್ತು ಭೋಕ್ತೃ—ಜ್ಞಾತೃವಲ್ಲ. ಅವನ ಜ್ಞಾತೃತ್ವವು ಏನಿದ್ದರೂ ಆಕಾಂಕ್ಷಾಪೂರಿತ ಕ್ರಿಯಾನುಭವದಲ್ಲಿ ಅಡಗಿರುವ ಒಂದು ಅಂಶ. ಆದ್ದರಿಂದಲೇ ಅವನ ಸಂಪರ್ಕದಲ್ಲಿರುವ ಭೌತ ವಸ್ತುಗಳು ಕೇವಲ ಜ್ಞೇಯವಸ್ತುಗಳಾಗಿಯೇ ಉಳಿಯದೆ ಅವನು ತನ್ನ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಕ್ರಿಯೆಯಲ್ಲಿ ಬಳಸುವ ಉಪಕರಣಗಳಾಗಿರುತ್ತವೆ.

ಇದೇ ರೀತಿ ಅವನು ಬೇರೆ ವ್ಯಕ್ತಿಗಳನ್ನೂ ಉಪಕರಣಗಳಂತೆ ಬಳಸಲು ಪ್ರಯತ್ನಿಸಿದರೆ, ಅವರ ಸ್ವಾತಂತ್ರ್ಯವು ಅಡ್ಡಬಂದು ಘರ್ಷಣೆಯಾಗುತ್ತದೆ. ಘರ್ಷಣೆಯನ್ನು ತಪ್ಪಿಸುವುದೇ ಸಹಕಾರ; ಸ್ವಾತಂತ್ರ್ಯ ಮತ್ತು ಸಹಕಾರಗಳೆರಡೂ ಬಾಳಿನ

---

*ಚೇತನ-ಅಚೇತನದ ಸ್ವರೂಪ, ಸಂಬಂಧ, ಭಿನ್ನತೆಗಳು ತತ್ವಶಾಸ್ತ್ರದಲ್ಲಿ ಬಹುಚರ್ಚಿತ ವಿಷಯ. ಇವನ್ನು ವಿವಿಧ ತಾತ್ವಿಕ ಪಂಥದವರು ಹೀಗೆ ನೋಡುವರು:

1. ಚೇತನ-ಅಚೇತನ ಭಿನ್ನವಲ್ಲ : (ಅ) ಅಚೇತನದಿಂದ ಚೇತನ — ಚಾರ್ವಾಕರು, ವಸ್ತುವಾದಿಗಳು (materialists) (ಆ) ಚೇತನದಿಂದ ಅಚೇತನ — ಜೈನರು, ಲೀಬ್ನಿಜ್, ಹೊವಿಸನ್.

2. ಎರಡೂ ತತ್ತ್ವಶಃ ಭಿನ್ನ, ಮೂರನೆಯ ತತ್ತ್ವವಾದ ದೇವರು ಇವುಗಳ ಪರಸ್ಪರ ಸಂಬಂಧಕ್ಕೆ ಕಾರಣ—ನೈಯಾಯಿಕರು, ಡೆಕಾರ್ಟ್.

3. ಪರಮ ವಸ್ತುವು ಅಖಂಡ, ಚಿದ್ರೂಪ ಬ್ರಹ್ಮ. ಚೇತನಾಚೇತನಭೇದ ಅವಿದ್ಯಾಕಲ್ಪಿತ. ತಾರ್ಕಿಕವಾಗಿ ಸಂಬಂಧಗಳೆಲ್ಲ ವಿರೋಧಾಭಾಸ, ಅಂತಿಮವಾಗಿ ಸಂಬಂಧರಹಿತ ಬ್ರಹ್ಮವೇ (Absolute) ಪರಮ—ಅದ್ವೈತ, ಎಫ್. ಎಚ್. ಬ್ರಾಡ್ಲೆ.

4. ಭಿನ್ನ ಚೇತನ, ಅಚೇತನಗಳು ಬ್ರಹ್ಮದ ಗುಣಗಳು—ವಿಶಿಷ್ಟಾದ್ವೈತ, ಸ್ಪಿನೋಜ. ಗುಣಗಳಲ್ಲ, ಪೂರ್ಣ ಅವಲಂಬಿತ ಎಂದೆನ್ನುವವರು ದ್ವೈತಿಗಳು.

5. ಬ್ರಹ್ಮ ಒಂದೇ. ಐಕ್ಯತೆ ಅಥವಾ ಪೂರ್ಣತೆಯನ್ನು ಕಳೆದುಕೊಳ್ಳದೆ ಅಚೇತನದಿಂದ ಚೇತನ ರೂಪಾಂತರಗೊಳ್ಳುವುದು—ಹೆಗೆಲ್, ಅರವಿಂದರು.

ಮುಖ್ಯಾಂಶಗಳು; ಆದಕಾರಣ ವ್ಯಕ್ತಿಯು ಮುಖ್ಯವಾಗಿ ಸಂಘಜೀವಿ.

ಈ ರೀತಿಯಾಗಿ ತನ್ನ ಆಕಾಂಕ್ಷೆಗಳು–ಅನುಭವಗಳು ಹಾಗೂ ಅವುಗಳಲ್ಲಿನ ನಶ್ವರತೆ, ತೃಪ್ತಿ–ಅತೃಪ್ತಿಗಳ ಮಧ್ಯೆ ತೊಳಲಾಟ, ಘರ್ಷಣೆ–ಸಹಕಾರಗಳ ತೂಗಾಟ—ಇವು ವ್ಯಕ್ತಿಯ ಬಾಳಿನ ಸ್ವರೂಪಾಂಶಗಳು. ಈ ರೀತಿಯಾದ ಜೀವನಕ್ಕೆ ಭಾವಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುವುದೂ ವ್ಯಕ್ತಿಗೆ ಸಹಜ. ಈ ಭಾವಪ್ರತಿಕ್ರಿಯೆಗಳು ವ್ಯಕ್ತಿಯ ಬಾಳಿಗೆ ಗಹನತೆ, ಗಂಭೀರತೆಗಳನ್ನು ತರುತ್ತವೆ.

ವ್ಯಕ್ತಿಗೂ ಕಾಲಕ್ಕೂ ನಿರ್ದಿಷ್ಟವಾದ ಆಂತರಿಕ ಸಂಬಂಧ ವಿದೆ. ಇದು ಅವನಿಗೆ ತನ್ನ ಸ್ವರೂಪದ ಅರಿವಿನಿಂದ ಉಂಟಾ ಗುತ್ತದೆ. ಕಳೆದುಹೋದ ಅನುಭವಗಳು ನೆನಪುಗಳಾಗಿ ಉಳಿದು, ಸಂಭವಿಸಬಹುದಾದ ಅನುಭವಗಳೂ ಅವನ ಅರಿವಿನಲ್ಲಿ ಆಸೆಗಳಾಗಿ ಹುದುಗಿರುತ್ತವೆ. ನೆನಪು–ಆಸೆಗಳ ದೆಸೆಯಿಂದ ಅವನು ವರ್ತಮಾನ ಕ್ರಿಯೆಯಲ್ಲಿ ತೊಡಗಿರುತ್ತಾನೆ. ಈ ರೀತಿ ಅವನು ಕಾಲವನ್ನು ಜೀವಿಸುತ್ತಾನೆ. ಈ ಅರ್ಥದಲ್ಲಿ ಅವನು ಇತರ ವಸ್ತು–ಪ್ರಾಣಿಗಳಂತೆ ಕಾಲದಲ್ಲಿ ಮಾತ್ರ ಇರದೆ ಕಾಲ ವನ್ನೇ ತನ್ನಲ್ಲಿ ಒಳಗೊಂಡಿರುತ್ತಾನೆ. ಇದರಿಂದ ಕಾಲದ ಅಳತೆ ಗೋಲು ಅವನಲ್ಲಿ ಕೇವಲ ವ್ಯಕ್ತಿಗತವಾಗಿ ಪರಿಣಮಿಸುತ್ತದೆ. ಆಸೆಗಳ ತೀವ್ರತೆ, ಕಾರ್ಯತಲ್ಲೀನತೆಗಳನ್ನು ಅವಲಂಬಿಸಿ ಕಾಲವು ನಿಧಾನ ಅಥವಾ ಬೇಗ ಸರಿಯುವಂತೆ ಅನ್ನಿಸುತ್ತದೆ. ಇದು ವ್ಯಕ್ತಿಗತ ಅಥವಾ ಆಂತರಿಕ ಕಾಲ ಮಾತ್ರ; ಬಾಹ್ಯಕ್ಕೆ ನಿಯತವಾಗಿ ಅನ್ವಯಿಸುವ ಭೌತಿಕ ಕಾಲವಲ್ಲ. ದೂರ–ಸಮೀಪಗಳೂ ಹೀಗೇ. ಅವನು ಸದಾ ಚಿಂತಿಸುವ ವ್ಯಕ್ತಿಯು ದೂರವಿದ್ದರೂ ಸಮೀಪ. ಇತರರು ಹತ್ತಿರವಿದ್ದರೂ ದೂರ.

ಈ ಎಲ್ಲ ಅಂಶಗಳಿಗಿಂತ, ಭೌತವಸ್ತು–ಪ್ರಾಣಿಗಳಿಂದ ವ್ಯಕ್ತಿಯನ್ನು ಅತಿ ವಿಶಿಷ್ಟವಾಗಿ ಬೇರ್ಪಡಿಸುವುದು ಸ್ವಾತಂತ್ರ್ಯ ಪ್ರಜ್ಞೆ. ಇದು ವ್ಯಕ್ತಿಯ ಅರಿವಿನ ಸ್ವರೂಪದಲ್ಲೆ ಬೇರೂರಿದ ಹುಟ್ಟುಗುಣ. ಅದನ್ನು ಅರಿತು, ತನ್ನ ಜೀವನದ ರೀತಿ ಹಾಗೂ ಮೌಲ್ಯಗಳನ್ನು ತಾನೇ ಸ್ವತಂತ್ರವಾಗಿ ನಿರ್ಣಯಿಸಬಹುದು ಇಲ್ಲವೆ ಬಾಹ್ಯ ಕಾರಣಕ್ಕೆ ಒಳಪಟ್ಟು ಸ್ವಾತಂತ್ರ್ಯವನ್ನು ಬಳಸದೆ ಇರಬಹುದು. ಮೊದಲನೆಯ ರೀತಿಯು ಸ್ವಾತಂತ್ರ್ಯವನ್ನು ಹೊಮ್ಮಿಸಿ ಮಾನವಪ್ರಾಣಿಯನ್ನು ವ್ಯಕ್ತಿಯನ್ನಾಗಿಸಿದರೆ, ಎರಡನೆಯದು ಅವನನ್ನು ಭೌತವಸ್ತುವಿನ ಮಟ್ಟಕ್ಕೆ ಕುಗ್ಗಿಸು ತ್ತದೆ. ಹೀಗಾಗಿ ಎಲ್ಲರೂ 'ವ್ಯಕ್ತಿ'ಗಳಲ್ಲ; ಸ್ವಾತಂತ್ರ್ಯ ಹಾಗೂ ಹೊಣೆಗಾರಿಕೆಯನ್ನು ಕಾರ್ಯಗತಗೊಳಿಸುವವನು ಮಾತ್ರ ನಿಜವಾದ 'ವ್ಯಕ್ತಿ'.

ಅನುಭಾವಿಗಳು ತಮ್ಮನ್ನು ದೈವದ ಉಪಕರಣವೆಂದು ಭಾವಿಸಿಕೊಳ್ಳುತ್ತಾರೆ. ಇದು ಸ್ವಾತಂತ್ರ್ಯಹರಣವಲ್ಲವೆಂದೂ, ಸ್ವಾತಂತ್ರ್ಯದ ಪರಮಾವಧಿಯೆಂದೂ ಅವರು ವಿವರಿಸುತ್ತಾರೆ. ವ್ಯಕ್ತಿಯು ಭಗವಂತನ ಮೇಲೆ ತನ್ನ ಪೂರ್ಣ ಅವಲಂಬನೆ ಯನ್ನು ಅರಿತಾಗ ಅವನ ವ್ಯಕ್ತಿತ್ವವು ಭಗವಂತನೊಡನೆ ಸಮಗ್ರಗೊಂಡು, ಅಪರಿಮಿತ ಸ್ವಾತಂತ್ರ್ಯ, ಕ್ರಿಯಾಶಕ್ತಿಗಳು ಉಂಟಾಗುವುದೆಂಬುದು ಅವರ ಅನುಭವ. ಅವರ ಅಭಿಮತ ದಂತೆ ದೇವರ ಮೇಲೆ ವ್ಯಕ್ತಿಯ ಪೂರ್ಣ ಅವಲಂಬನೆ ಮತ್ತು ಸ್ವಾತಂತ್ರ್ಯ ಎರಡೂ ಪರಸ್ಪರ ವಿರುದ್ಧವಾದ ಪರಿಕಲ್ಪನೆಗಳಲ್ಲ. (ಮುಂದುವರಿಯುವುದು)

**ರಸ್ತೆಯ ಪರಿಚಯ**

ಒಬ್ಬ ತಂದೆಯು ತನ್ನ ಮಗನನ್ನು ಶಾಲೆಗೆ ಮೊದಲ ದಿನದಂದು ಕರೆದುಕೊಂಡು ಬಂದು ಸೇರಿಸಿದ. ಮಗನಿಗೆ ರಸ್ತೆಯನ್ನು ಪರಿಚಯ ಮಾಡಿಸಿಕೊಟ್ಟು, ಇಪ್ಪತ್ತು ನಿಮಿಷಗಳಲ್ಲಿ ಶಾಲೆಯನ್ನು ತಲುಪಬಹುದು ಎಂದು ತೋರಿಸಿದ. ಮುಂದಿನ ಎರಡು ದಿನಗಳಲ್ಲಿ ಮಗು ಶಾಲೆಗೆ ಹತ್ತು ನಿಮಿಷ ತಡವಾಗಿ ಬರುತ್ತಿದೆ ಎಂಬ ದೂರು ಬಂದಾಗ, ಕಾರಣ ತಿಳಿಯಲು ಮತ್ತೆ ರಸ್ತೆಯನ್ನು ಪರಿಚಯಿಸುತ್ತ ಮಗನೊಂದಿಗೆ ನಡೆದ. ಮಗು ರಸ್ತೆಯಲ್ಲಿ ಹೋಗುತ್ತಿದ್ದ ಇರುವೆಗಳ ಸಾಲನ್ನು ಗಮನಿಸುತ್ತ, ಆಕಾಶದಲ್ಲಿ ಹಾರುವ ಪಕ್ಷಿಗಳನ್ನು ನೋಡುತ್ತ, ಅಂಗಡಿಯ ಮುಂದೆ ಜೋಡಿಸಿದ್ದ ವಿಧವಿಧವಾದ ಗಾಡಿಗಳನ್ನು ಮೆಚ್ಚುತ್ತ, ನಾಯಿಗಳಿಗೆ ಬಿಸ್ಕತ್ತನ್ನು ಹಾಕುತ್ತ ನಡೆಯುತ್ತಿತ್ತು! ಮಗುವಿನ ಪ್ರಪಂಚದ ಬಣ್ಣ, ರೂಪಗಳನ್ನು ತಿಳಿಯುವ ವ್ಯವಧಾನ ತಂದೆಗೆ ಇರಬೇಕಲ್ಲವೇ!

## ಆಶ್ರಮದ ವಿಶೇಷ ಉತ್ಸವದ ದಿನಗಳು

**ಅಕ್ಟೋಬರ್ ೨೦೦೬**

| | | |
|---|---|---|
| ೦೧ | ದುರ್ಗಾಪೂಜಾ ಮಹಾನವಮಿ | ಭಾನುವಾರ |
| ೦೨ | ವಿಜಯದಶಮಿ/ ಮಧ್ವಜಯಂತಿ | ಸೋಮವಾರ |
| ೦೩ | ಏಕಾದಶಿ | ಮಂಗಳವಾರ |
| ೧೭ | ಏಕಾದಶಿ | ಮಂಗಳವಾರ |
| ೨೧ | ಶ್ರೀ ಶ್ರೀ ಕಾಳೀಪೂಜಾ | ಭಾನುವಾರ |